


# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)



ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೩೪

### ೧೮

ವಿರಜಾನಂದರು ಮಾಯಾವತಿಯಿಂದ ಶ್ಯಾಮಲಾತಾಲ್‌ಗೆ ಬಂದು ಸರಿಯಾಗಿ ಒಂದು ತಿಂಗಳಾಗಿತ್ತು. ಅಕ್ಟೋಬರ್ ೨೭ ರಂದು ಅಲ್ಲಿಂದ ಆಲ್ಮೋರಕ್ಕೆ ಹೊರಟರು. ಟನಕ್‌ಪುರದಲ್ಲಿ ರೈಲು ಹಿಡಿದು, ಫಿಲಿಭಿತ್ ಮತ್ತು ಭೋಜಿಪುರ ಈ ಎರಡೂ ಜಂಕ್ಷನ್‌ಗಳಲ್ಲಿ ರೈಲನ್ನು ಬದಲಾಯಿಸಿ ಸಂಜೆಯ ಹೊತ್ತಿಗೆ ಕಾಠ್ ಗೋದಾಮ್ ತಲುಪಿದರು. ನಿಲ್ದಾಣದಲ್ಲಿ ಅನಂತಾನಂದರು (ಕಾನ್ಹಾಯ್) ಹಾಜರ್!

ನೀನು?

ಹೌದು ಮಹಾರಾಜ್, ಈಗ ಆಲ್ಮೋರದಲ್ಲಿದ್ದೇನೆ. ಬೋಶಿ ನಿಮ್ಮನ್ನು ಕರೆತರಲು ನನ್ನನ್ನು ಕಳುಹಿಸಿದ.

ಅನಿರೀಕ್ಷಿತವಾಗಿ ಅನಂತಾನಂದರನ್ನು ಕಂಡು ವಿರಜಾನಂದರಿಗೆ ತುಂಬ ಆನಂದವಾಯಿತು. ನಿರೀಕ್ಷಣಾ ಕೊಠಡಿಯಲ್ಲಿ ಕುಳಿತು ಅವರೊಂದಿಗೆ ಮಾತುಕತೆಯಾಡತೊಡಗಿದರು. ಕಾನ್ಹಾಯ್ ''ನಾನು ನಿಮ್ಮೊಂದಿಗೆ ಆಲ್ಮೋರದಿಂದ ಕಂಖಲ್‌ಗೂ ಬರುವೆ'' ಎಂದರು. ಮಹಾರಾಜರು ಸಂತೋಷಪಟ್ಟು ''ಬಹಳ ಒಳ್ಳೆಯದು, ಇವರಿಬ್ಬರೂ (ಸೇವಕರು) ಇನ್ನೂ ಚಿಕ್ಕವರು, ನೀನಿದ್ದರೆ ನಿಶ್ಚಿಂತೆ'' ಎಂದು ಹೇಳಿದರು.

ಅನಂತಾನಂದರು ಮೊದಲೇ ಸ್ಟೇಷನ್ನಿಗೆ ಹತ್ತಿರದ ಒಂದು ತಿಂಡಿಯ ಅಂಗಡಿಯಲ್ಲಿ ಬಿಸಿಯಾದ ಅಪ್ಪಟ ಹಾಲು ಮತ್ತು ಬಿಸಿ ಪೂರಿ-ಪಲ್ಯದ ಏರ್ಪಾಟನ್ನು ಮಾಡಿದ್ದರು. ನಿರೀಕ್ಷಣಾ ಕೊಠಡಿಯಲ್ಲೇ ರಾತ್ರಿಯನ್ನು ಕಳೆಯಲಾಯಿತು. ಆಲ್ಮೋರದ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಮಿ. ವೀರ ಎಂಬ ಬೋಶಿ ಬಾಬುವಿನ ಸ್ನೇಹಿತರು ಬೆಳಗ್ಗೆಯೇ ತಮ್ಮ ಮೋಟಾರು ಗಾಡಿಯಲ್ಲಿ ಬಂದರು. ಅನಂತಾನಂದರು ಅವರ ಮೋಟಾರಿನಲ್ಲಿ ವಿರಜಾನಂದರನ್ನು ಕೂರಿಸಿ, ತಾವು ಮಹಾರಾಜರ ಇಬ್ಬರು ಸೇವಕರೊಂದಿಗೆ ಬಸ್ ಹಿಡಿದರು.

ಆಲ್ಮೋರದಲ್ಲಿ ಆರುದಿನಗಳಿದ್ದರು. ತುಂಬ ಚಳಿ. ಬೋಶಿ ಬಾಬು ಮತ್ತು ಅವರ ಪತ್ನಿ, ಮಹಾರಾಜರನ್ನು ಆರಾಮವಾಗಿಡಲು ಮಾಡಿದ ಪ್ರಯತ್ನ ಎಷ್ಟೊಂದು! ಅವರ ದೇವರ ಮನೆಯನ್ನು ಕಂಡು ವಿರಜಾನಂದರಿಗೆ ತುಂಬ ಆನಂದವಾಯಿತು. ಒಂದು ದಿನ ಮಾತನಾಡುತ್ತ, ''ಬೋಶಿ ಅದೆಷ್ಟೊಂದು ಕೆಲಸ ಮಾಡುತ್ತಾನೆ, ಆದರೂ ಜಪಧ್ಯಾನದಲ್ಲಿ ತುಂಬ regular (ಕ್ಲಿಪ್ತ). ತೋಟದ ಅತ್ಯುತ್ಕೃಷ್ಟ ಹೂವನ್ನು ತಪ್ಪದೇ ದೇವರಿಗೆ ಅರ್ಪಿಸುತ್ತಾನೆ'' ಎಂದರು.

ಮಹಾರಾಜರು ವಿಜಯದಶಮಿಯ ನಂತರವೇ ಆಲ್ಮೋರಕ್ಕೆ ಬಂದದ್ದರಿಂದ ಭಕ್ತರ ಮತ್ತು ಮಠದವರ ನೂರಾರು 'ವಿಜಯ ದಶಮಿ'ಯ ಪ್ರಣಾಮ ಪತ್ರಗಳಿಗೆ ಇಲ್ಲಿಂದಲೇ ಉತ್ತರಿಸಬೇಕಾಯಿತು. ಹೀಗಾಗಿ ಸ್ವಲ್ಪ ಸಮಯ ಇದರಲ್ಲೇ ಕಳೆದುಹೋಗುತ್ತಿತ್ತು. ಬೆಳಗು-ಬೈಗುಗಳಲ್ಲಿ ಸ್ಥಳೀಯ ಆಶ್ರಮದ ಸಂನ್ಯಾಸಿಗಳೂ, ಭಕ್ತರೂ ಬರುತ್ತಿದ್ದರು, ಅವರೊಂದಿಗೆ ಮಾತುಕತೆ ನಡೆಯುತ್ತಿತ್ತು. ಒಂದು ದಿನ ನಾಟ್ಯ ಕಲಾವಿದನಾದ ಉದಯ ಶಂಕರನ ಕಲಾಕೇಂದ್ರಕ್ಕೆ ಭೇಟಿಯಿತ್ತರು.

ಆಲ್ಮೋರವು ತನ್ನ ಮಡಿಲಲ್ಲಿ ಸ್ವಾಮಿ ವಿವೇಕಾನಂದರ ನೆನಪಿನ ಗಣಿಯನ್ನೇ ಹಿಡಿದಿಟ್ಟಿದೆ. ಸ್ವಾಮೀಜಿಯವರು ಮೂರು ಬಾರಿ ಆಲ್ಮೋರಕ್ಕೆ ಭೇಟಿಯಿತ್ತಿದ್ದರು. ಪರಿವ್ರಾಜಕರಾಗಿದ್ದಾಗ ಮೊದಲ ಬಾರಿ, ವಿದೇಶದಿಂದ ಹಿಂತಿರುಗಿದ ನಂತರ ಮತ್ತೆರಡು ಬಾರಿ. ಕೊನೆಯ ಬಾರಿ ನಿವೇದಿತೆಯೂ ಜೊತೆಗಿದ್ದಳು. ಸ್ವಾಮೀಜಿಯವರ ದಿವ್ಯಸಾನ್ನಿಧ್ಯದಲ್ಲಿ ಇಲ್ಲಿ ಕಳೆದ ಒಂದು ತಿಂಗಳ ನೆನಪುಗಳನ್ನು ಆಕೆ **'ಹಿಮಾಲಯದಲ್ಲಿ ಸ್ವಾಮೀಜಿಯವರೊಂದಿಗೆ'** (Notes on Some Wanderings with Swami Vivekananda) ಎಂಬ ಪುಸ್ತಕದಲ್ಲಿ ವರ್ಣಿಸಿದ್ದಾಳೆ.

ಸ್ವಾಮೀಜಿಯವರ ಎರಡನೇ ಭೇಟಿಯ ಸಮಯದಲ್ಲಿ ಅವರ ಅತ್ಯಂತ ವಿಶ್ವಾಸಾರ್ಹ ಶಿಷ್ಯರಾದ ಮಿ. ಗುಡ್‌ವಿನ್ ಅವರೊಂದಿಗಿದ್ದರು. ಸರಿಯಾಗಿ ಒಂದು ವರ್ಷದ ನಂತರ ಮತ್ತೆ ವಿವೇಕಾನಂದರು ಆಲ್ಮೋರದಲ್ಲಿದ್ದರು. ಅಲ್ಲಿದ್ದಾಗಲೇ ಒಂದು ದಿನ ಮಿ. ಗುಡ್‌ವಿನ್ ಉದಕಮಂಡಲದಲ್ಲಿ ತಮ್ಮ ಕೊನೆಯುಸಿರೆಳೆದಿದ್ದಾರೆ ಎಂಬ ಅತಿ ದಾರುಣ ವಾರ್ತೆ ಸ್ವಾಮೀಜಿಗೆ ತಲುಪಿತು. ಸೋದರಿ ನಿವೇದಿತೆಯ ಮೇಲೆ ಹೇಳಿದ ಪುಸ್ತಕದಲ್ಲಿ ಇದರ ಬಗ್ಗೆ ಹೀಗೆ ಬರೆದಿದ್ದಾರೆ:

ಮಾರನೇ ದಿನ ಅವರು (ಸ್ವಾಮೀಜಿ) ಬೆಳಗ್ಗೆಯೇ ಬಂದರು. ಯಾವುದೋ ಒಂದು ಗಂಭೀರ ಭಾವದಲ್ಲಿ ತನ್ಮಯರಾಗಿದ್ದರು! ಬೆಳಗ್ಗೆ ಅಂದು ನಾಲ್ಕಕ್ಕೇ ಅವರ ನಿದ್ರಾಭಂಗವಾಗಿತ್ತೆಂದು ನಂತರ ಅವರು ತಿಳಿಸಿದರು. ನಮ್ಮಲ್ಲೊಬ್ಬರು ಅವರಿಗೆ ಗುಡ್‌ವಿನ್‌ನ ಮರಣವಾರ್ತೆಯನ್ನು ತಿಳಿಸಿದರು. ಇದನ್ನು ಸ್ವಾಮೀಜಿಯವರು ನೀರವವಾಗಿ ಸಹಿಸಿದರು. ಕೆಲವು ದಿನಗಳ ನಂತರ ಇಂತಹ ಸುದ್ದಿಯನ್ನು ಕೇಳಿದ ಆ ಸ್ಥಳದಲ್ಲಿರಲು ನಿರಾಕರಿಸಿದರು. ಮತ್ತು ತಮ್ಮ ನೆಚ್ಚಿನ ಶಿಷ್ಯನ ಚಿತ್ರವನ್ನು ಮನಸ್ಸಿಗೆ ನಿರಂತರವಾಗಿ ತರುತ್ತಿರುವ ತಮ್ಮ ದುರ್ಬಲತೆಯ ಬಗ್ಗೆಯೂ ಆಕ್ಷೇಪಿಸಿ ಕೊಂಡರು. 'ಒಬ್ಬರ ನೆನಪಿನಿಂದ ಹೀಗೆ ವೇದನೆಗೀಡಾಗುವುದು ಮೀನು, ನಾಯಿಗಳ ಗುಣಗಳನ್ನು ನೆನಪಿಸಿಕೊಳ್ಳುವುದಕ್ಕಿಂತ ಹೆಚ್ಚೇನಲ್ಲ' ಎಂದು ಹೀಗಳೆದರು. ಮನುಷ್ಯನು ಈ ಭ್ರಮೆಯನ್ನು ಜಯಿಸಬೇಕು ಮತ್ತು ಸತ್ತವರೆಲ್ಲ ಎಂದಿನಂತೆ ನಮ್ಮೊಂದಿಗೇ ಇರುವರು ಎಂಬುದನ್ನು ತಿಳಿಯಬೇಕು, ಒಬ್ಬರಿಂದ ದೂರವಾಗುವುದು ಅಥವಾ ಒಬ್ಬರ ಅನುಪಸ್ಥಿತಿ ಎಂಬುದೇ ಒಂದು ಕಲ್ಪನೆ ಎಂದರು. ಕೆಲವೊಮ್ಮೆ 'ಒಬ್ಬ ಭಗವಂತನ ಇಚ್ಛಾನುಸಾರ ಈ ಪ್ರಪಂಚ ನಡೆಯುತ್ತಿದೆ ಎಂದು ತಿಳಿಯುವುದು ಎಂಥ ಮಹಾ ತಪ್ಪು' ಎಂದು ಕಹಿಯಾಗಿ ನುಡಿಯುತ್ತಿದ್ದರು. ''ಗುಡ್‌ವಿನ್‌ನನ್ನು ಕೊಂದದ್ದಕ್ಕಾಗಿ ಅಂತಹ ಭಗವಂತನೊಡನೆ ಯುದ್ಧ ಮಾಡಿ ಅವನನ್ನು ಕೊಲ್ಲುವುದು ನಮ್ಮ ಕರ್ತವ್ಯವಲ್ಲವೆ?! ಓಹ್! ಗುಡ್‌ವಿನ್ ಇನ್ನೂ ಬದುಕಿದ್ದರೆ ಎಷ್ಟೊಂದು ಕೆಲಸ ಮಾಡುತ್ತಿದ್ದ'' ಎಂದು ಉದ್ಗರಿಸುತ್ತಿದ್ದರು.

ಗುಡ್‌ವಿನ್‌ನನ್ನು ಕುರಿತು ಸ್ವಾಮೀಜಿಯವರು ಆಲ್ಮೋರದಲ್ಲಿದ್ದಾಗ ಒಂದು ಕವಿತೆಯನ್ನು ಬರೆದಿದ್ದರು 'Requiescat in Peace' (ಆತನು ಶಾಂತಿಯಿಂದಿರಲಿ) ಎಂಬ ಶೀರ್ಷಿಕೆಯಲ್ಲಿ ಬರೆದ ಈ ಕವಿತೆಯನ್ನು ಗುಡ್‌ವಿನ್‌ನ ಶೋಕತಪ್ತ ತಾಯಿಗೆ ಕಳುಹಿಸಿದ್ದರು. ಒಂದು ಪತ್ರದಲ್ಲಿ ಸ್ವಾಮೀಜಿಯವರು, ''ಗುಡ್‌ವಿನ್‌ನ ಋಣ ತೀರಿಸಲಾರದಂತಹುದು. ನನ್ನ ವಿಚಾರ ಧಾರೆಯಿಂದ ಯಾರಾದರೂ ಪ್ರಭಾವಿತರಾಗಿದ್ದೇವೆ ಎಂದೆಣಿಸಿದ್ದರೆ, ಅವುಗಳಲ್ಲಿ ಹೆಚ್ಚೂ ಕಡಿಮೆ ಪ್ರತಿಯೊಂದು ಪದವೂ ಕೂಡ ಪ್ರಕಟವಾದದ್ದು ಗುಡ್‌ವಿನ್‌ನ ದಣಿವರಿಯದ ನಿಃಸ್ವಾರ್ಥ ಶ್ರಮದಿಂದ ಎಂಬುದನ್ನು ತಿಳಿಯಬೇಕು. ಅವನ ಮರಣದಿಂದ ನಿಷ್ಕಪಟ ಸ್ನೇಹಿತನನ್ನೂ ಭಕ್ತಿಯುತ ಶಿಷ್ಯನನ್ನೂ ಮತ್ತು ದಣಿವರಿಯದ ಅದ್ಭುತ ಕೆಲಸಗಾರನೊಬ್ಬನನ್ನೂ ನಾನು ಕಳೆದುಕೊಂಡಂತಾಗಿದೆ. ಇತರರಿಗಾಗಿಯೇ ಜನ್ಮತಾಳುವ ಕೆಲವೇ ಕೆಲವರಲ್ಲೊಬ್ಬರನ್ನು ಕಳೆದುಕೊಂಡು ಜಗತ್ತು ಇಂದು ಬಡವಾಗಿದೆ'' ಎಂದು ಬರೆದಿದ್ದರು.

ಆಲ್ಮೋರದ 'ಚಿಲ್ಕಾಪೇಟ್' ಎಂಬಲ್ಲಿ ಶ್ರೀರಾಮಕೃಷ್ಣ ಕುಟೀರ ಎಂಬ ಆಶ್ರಮವಿದೆ. ಪೂಜ್ಯ ಹರಿ ಮಹಾರಾಜ್ ಮತ್ತು ಮಹಾಪುರುಷ ಮಹಾರಾಜರ ಪ್ರಯತ್ನದಿಂದ ಇದು ೧೯೧೬ರ ಮೇ ತಿಂಗಳಲ್ಲಿ ಸ್ಥಾಪಿತವಾಗಿತ್ತು. ಹರಿ ಮಹಾರಾಜರ ದೇಹತ್ಯಾಗವಾದ ಮೇಲೆ ಅವರು ಉಪಯೋಗಿಸಿದ್ದ ವಸ್ತುಗಳನ್ನು ಆಶ್ರಮದ ಒಂದು ಕೊಠಡಿಯಲ್ಲಿ ಸಂರಕ್ಷಿಸಿಟ್ಟಿದ್ದಾರೆ. ಈ ಕೊಠಡಿಯನ್ನು ಆಶ್ರಮವಾಸಿಗಳು ಜಪ-ಧ್ಯಾನಾದಿಗಳಿಗೆ ಉಪಯೋಗಿಸುತ್ತಾರೆ. ವಿರಜಾನಂದರು ಈ ಕೊಠಡಿಯಲ್ಲೇ ಒಂದು ದಿನ ಕೆಲವು ಭಕ್ತರಿಗೆ ಮಂತ್ರದೀಕ್ಷೆಯನ್ನಿತ್ತರು.

ಆಲ್ಮೋರ ಕೇಂದ್ರದ ಅಧ್ಯಕ್ಷರಾದ ಬ್ರಹ್ಮಚಾರಿ ರಾಮ್ ಮಹಾರಾಜರು ಈಗ ಎಪ್ಪತ್ತಕ್ಕೆ ಕಾಲಿಟ್ಟಿದ್ದಾರೆ. ಮಹಾರಾಜರಿಗೆ ಅರವತ್ತಾರು ವರ್ಷ ನಡೆಯುತ್ತಲಿದೆ. ರಾಮ್ ಮಹಾರಾಜರು ಸ್ವಾಮೀಜಿಯವರನ್ನು ಕಂಡಿದ್ದರು. ಮತ್ತವರ ಪವಿತ್ರ ಸಂಗ ಪಡೆದಿದ್ದರು. ಸ್ವಾಮಿ ಬ್ರಹ್ಮಾನಂದರಿಂದ ಮಂತ್ರದೀಕ್ಷೆಯನ್ನು ಪಡೆದಿದ್ದರು. ವಿರಜಾನಂದರಿಗಿಂತ ರಾಮ್ ಮಹಾರಾಜರು ೨-೩ ವರ್ಷ ಹಿರಿಯರೇ ಆಗಿದ್ದರೂ ವಿರಜಾನಂದರನ್ನು ಬಹಳ ಗೌರವದಿಂದ ಕಾಣುತ್ತಿದ್ದರು. ಏಕೆಂದರೆ ಮಠಕ್ಕೆ ವಿರಜಾನಂದರು ರಾಮ್ ಮಹಾರಾಜರಿಗಿಂತ ಹನ್ನೆರಡು ವರ್ಷ ಮೊದಲೇ ಬಂದವರು. ರಾಮ್ ಮಹಾರಾಜರ ಹೆಸರು ಅತುಲ್ ಎಂದು. ನಂತರದಲ್ಲಿ ಮತ್ತೆ ಮೂವರು 'ಅತುಲ'ರು ಮಠ ಸೇರಿದರು. ಆಗ ಪ್ರೇಮಾನಂದರು ನಾಲ್ಕು ಜನರ ಹೆಸರನ್ನು ರಾಮ, ಲಕ್ಷ್ಮಣ, ಭರತ ಮತ್ತು ಶತ್ರುಘ್ನ ಎಂದು ಬದಲಾಯಿಸಿದ್ದರು.

ಸ್ವಾಮಿ ವಿವೇಕಾನಂದರ ಪುಣ್ಯಸ್ಮೃತಿಗಳಿಂದ ಕೂಡಿದ್ದ ಆಲ್ಮೋರಕ್ಕೆ ರಾಮ್ ಮಹಾರಾಜರು ಆಗಸ್ಟ್ ತಿಂಗಳಲ್ಲಿ ಬಂದರು. ಪೂಜ್ಯರಾದ ಶಿವಾನಂದರು ಮತ್ತು ತುರೀಯಾನಂದರು ಆಗ ಭಕ್ತರಾದ ಬದ್ರೀಲಾಲ್ ಷಾರ ನಿರ್ಜನವಾದ ತೋಟದ ಮನೆಯೊಂದರಲ್ಲಿ ತಪಸ್ಸು ಮಾಡುತ್ತಿದ್ದರು. ರಾಮ್ ಮಹಾರಾಜರು 'ಮಧುಕರಿ'ಯಿಂದ ಜೀವಿಸಿ, ಜಪಧ್ಯಾನದಲ್ಲಿ ತಮ್ಮ ಕಾಲವನ್ನು ಕಳೆಯುತ್ತಿದ್ದರು. ಕೆಲವೊಮ್ಮೆ ಈ ಇಬ್ಬರು ಮಹಾಪುರುಷರ ಸೇವೆಯಲ್ಲಿ ನಿರತರಾಗಿರುತ್ತಿದ್ದರು. ಕಾಲಕ್ರಮದಲ್ಲಿ ಇಲ್ಲಿ ಆಶ್ರಮವೊಂದನ್ನು ಸ್ಥಾಪಿಸುವ ಪ್ರಯತ್ನಗಳು ನಡೆದವು. ಈ ಕಾರ್ಯಸಿದ್ಧಿಗಾಗಿ ರಾಮ್ ಮಹಾರಾಜರು ಹರಿ ಮಹಾರಾಜರಿಗೆ ಬಹಳವಾಗಿ ನೆರವಾಗಿದ್ದರು. ಹೊಸದಾಗಿ ಸ್ಥಾಪಿಸಲ್ಪಟ್ಟ ಈ ಆಶ್ರಮದಲ್ಲಿ ಸುಮಾರು ೫-೬ ತಿಂಗಳುಗಳು ಇಬ್ಬರೂ ವಾಸವಾಗಿದ್ದರು. ೧೯೧೬ರ ಡಿಸೆಂಬರ್ ತಿಂಗಳಲ್ಲಿ ತುರೀಯಾನಂದರು ಕಾಶಿಗೆ ಹೊರಟುಹೋದರು. ರಾಮ್ ಮಹಾರಾಜರು ಆಲ್ಮೋರದಲ್ಲೇ ಉಳಿದುಕೊಂಡರು.

ಇದಾಗಿ ೨೨ ವರ್ಷಗಳು ಕಳೆದುಹೋಗಿವೆ. ಹರಿಮಹಾರಾಜರು, ರಾಜಾ ಮಹಾರಾಜರು, ಮಹಾಪುರುಷ್ ಮಹಾರಾಜರು ಇವರೆಲ್ಲ ಈ ಪ್ರಪಂಚದ ತಮ್ಮ ಕೆಲಸಗಳನ್ನು ಮುಗಿಸಿಕೊಂಡು ಸ್ವಧಾಮಕ್ಕೆ ತೆರಳಿದ್ದಾರೆ. ಇವರೆಲ್ಲರ ಸ್ಮೃತಿಗಳನ್ನೇ ತಮ್ಮ ಹೃದಯದ ಅಕ್ಷಯ ಭಂಡಾರವನ್ನಾಗಿ ಮಾಡಿಕೊಂಡು ರಾಮ್

ಮಹಾರಾಜರು ಹಿಮಾಲಯದ ಈ ಕುಟೀರದಲ್ಲೇ ಈವರೆಗೂ ಬೀಡುಬಿಟ್ಟಿದ್ದಾರೆ. ಅವರ ಹಗಲಿರುಳಿನ ಬಹುಕಾಲವು ನಿರಂತರ 'ಇಷ್ಟ' ಚಿಂತನೆಯಲ್ಲೇ ಕಳೆಯುತ್ತಿತ್ತು. ಈ ವೃದ್ಧರ ಆನಂದ ಮಯ, ಸೌಮ್ಯ ಉಜ್ವಲಮೂರ್ತಿ, ಆತ್ಮೀಯ ವ್ಯವಹಾರ ಮತ್ತು ಬಾಲಸುಲಭ ಸರಳತೆಯು ಎಂಥವರನ್ನೂ ಸ್ವಲ್ಪ ಸಮಯದ ಪರಿಚಯದಲ್ಲೇ ಒಂದು ಅತೀಂದ್ರಿಯ ಬಾಂಧವ್ಯದಲ್ಲಿ ಕಟ್ಟಿಹಾಕುತ್ತಿತ್ತು. ಅವರ ಬಾಯಲ್ಲಿ ಸರ್ವದಾ 'ರಾಮೇರ್ ಇಚ್ಛಾ' ಎಂಬ ನುಡಿಯಿರುತ್ತಿತ್ತು. ಅವರ ಆಶ್ರಮವಾದರೋ ಶಿವನ ಸಂಸಾರವೇ ಆಗಿತ್ತು! ನಿರ್ಜನ ಪ್ರದೇಶದಲ್ಲಿದ್ದುಕೊಂಡು ಜಪ-ಧ್ಯಾನ ಮಾಡಲಿಚ್ಛಿಸುವ ಸಾಧು-ಬ್ರಹ್ಮಚಾರಿಗಳಿಗೆ ರಾಮ್ ಮಹಾರಾಜರು ಆಶ್ರಯವನ್ನು ನೀಡುತ್ತಿದ್ದರು; 'ರಾಮನ ಇಚ್ಛೆ'ಯಂತೆ ಏನು ದೊರೆಯುತ್ತಿತ್ತೋ ಅದರಿಂದಲೇ ಅತ್ಯಂತ ಪ್ರೀತಿಯಿಂದ ಅವರ ಸೇವೆಯನ್ನು ಮಾಡುತ್ತಿದ್ದರು — ಅವರೆಲ್ಲರೂ ತಮ್ಮ ಮಕ್ಕಳೇನೋ ಎಂಬುವಂತೆ.

ಆಲ್ಮೋರದ ಒಂದು ಸಂಜೆ. ಗಾಢ ನೀಲಪರ್ವತಗಳು ನೀಲಾಕಾಶದ ಅಸೀಮ ನೀಲವರ್ಣದೊಂದಿಗೆ ಮಿಳಿತಹೊಂದಿದೆ. ಅನತಿದೂರದಲ್ಲಿದ್ದ ಪರ್ವತದ ತಪ್ಪಲಿನ ಪುಟ್ಟ ಪುಟ್ಟ ಮನೆಗಳಿಂದ ಹೊರಬರುತ್ತಿದ್ದ ದೀಪದ ಬೆಳಕು ಒತ್ತಾಗಿ ಬೆಳೆದ ಮರದ ಸಾಲುಗಳನ್ನು ತೂರಿಬರುತ್ತಿದ್ದು, ಶೋಭೆಯನ್ನು ಮತ್ತಷ್ಟು ಹೆಚ್ಚಿಸುತ್ತಿತ್ತು. ಹಿಮಾಲಯದ ನಿಃಸ್ತಬ್ಧ ಸಂಧ್ಯೆ. ವಿರಜಾನಂದರು ಮಠಾಧ್ಯಕ್ಷರಾದ ನಂತರ ರಾಮ್ ಮಹಾರಾಜರು ಅವರನ್ನು ನೋಡುತ್ತಿರುವುದು ಇದೇ ಮೊದಲು. ಬಹಳ ವರ್ಷಗಳ ನಂತರ ಪರಸ್ಪರರು ಭೇಟಿಯಾಗುತ್ತಿದ್ದಾರಾದ್ದರಿಂದ ಇಬ್ಬರಿಗೂ ಮಹದಾನಂದ. ಹಿಂದಿನ ದಿನಗಳ ನೆನಪುಗಳು ಈರ್ವರ ಹೃದಯವನ್ನೂ ಆವೇಗದಿಂದ ಸ್ತಬ್ಧಗೊಳಿಸುತ್ತಿವೆ. ಮಧ್ಯೆ ಮಧ್ಯೆ ಮಾತು ನಿಂತು ಹೋಗುತ್ತಿದೆ. ಆ ನೀರವ ಸನ್ನಿಧಿಯಲ್ಲಿ ಭಾಷೆಗೆ ಮೀರಿದ ಭಾವನೆಗಳು ಪರಸ್ಪರರನ್ನು ಪುಳಕಿತಗೊಳಿಸುತ್ತಿದ್ದವು.[೧]

ಆಲ್ಮೋರದಿಂದ ಹೊರಡುವ ಹಿಂದಿನ ರಾತ್ರಿ ವಿರಜಾನಂದರು ಗುಪ್ತ ಮಹಾರಾಜರ ಬಗ್ಗೆ ಕೆಲವು ಮಾತುಗಳನ್ನಾಡಿದರು. ವಿರಜಾನಂದರು ಬರೆದ ಸ್ಮೃತಿಲೇಖನದಿಂದ ಆರಿಸಿದ್ದು: ''ಪರಿವ್ರಾಜಕ ದಿನಗಳಲ್ಲಿ ಸ್ವಾಮೀಜಿಯವರು ಹತ್ರಾಸ್ ಸ್ಟೇಷನ್ನಿಗೆ ಬಂದಾಗ ಅಲ್ಲಿಯ ಅಸಿಸ್ಟೆಂಟ್ ಸ್ಟೇಷನ್ ಮಾಸ್ಟರ್ ಆದ ಶರಚ್ಚಂದ್ರ ಗುಪ್ತರು ಅವರ ಮನೋಹರ ರೂಪವನ್ನೂ, ಕೋರೈಸುವ ಉಜ್ವಲ ನೇತ್ರಗಳನ್ನೂ ನೋಡಿ ಮಾರುಹೋದರು. ತಮ್ಮೊಡನೆ ಕೆಲವು ದಿನಗಳು ಇರಬೇಕೆಂದು ಅವರಲ್ಲಿ ಬೇಡಿಕೊಂಡರು. ಸ್ವಾಮೀಜಿಯವರೂ ಸಹ ಅದಕ್ಕೆ ಸಮ್ಮತಿಸಿ ಶರತ್ ಗುಪ್ತನ ಮನೆಯಲ್ಲಿ ತಂಗಿದರು. ನಾನಾ ವಿಷಯಗಳ ಮಾತುಕತೆಗಳನ್ನಾಡುತ್ತ, ಹಾಡುಹಾಡುತ್ತ ಸ್ವಾಮೀಜಿಯವರು ಆನಂದದಿಂದಿದ್ದರು. ಗುಪ್ತ ಮಹಾರಾಜರು ಸ್ವಾಮೀಜಿಯವರ ಪ್ರೀತಿಗೆ ಸಿಲುಕಿದರು. ಅವರನ್ನಗಲುವುದು ಅಸಾಧ್ಯವಾಯಿತು. ಸ್ವಾಮೀಜಿಯವರು ಅಲ್ಲಿಂದ ಹೊರಡುವ ಮೊದಲು ಗುಪ್ತ ಮಹಾರಾಜರು, ''ಮಹಾರಾಜ್ ನನ್ನನ್ನು ನಿಮ್ಮೊಂದಿಗೆ ಕರೆದೊಯ್ಯಿರಿ, ನಿಮ್ಮ ಗಂಟುಮೂಟೆ ಹೊರುವೆ, ನಿಮ್ಮ ಸೇವೆ ಮಾಡುವೆ'' ಎಂದರು. ಸ್ವಾಮೀಜಿ ಕೇಳಿದರು, ''ನಿನಗದು ಸಾಧ್ಯವೆ?'' ನಂತರ ಒಂದು ಹಾಡಿನ ಚರಣವನ್ನು ಹೇಳತೊಡಗಿದರು (ಭಾರತ ಚಂದ್ರ ಕವಿಯ 'ವಿದ್ಯಾಸುಂದರ' ಎಂಬ ಕಾವ್ಯದಿಂದ):

'ವಿದ್ಯೆಯನ್ನು ಪಡೆಯಲಿಚ್ಛಿಸುವೆಯಾದರೆ
ನಿನ್ನ ಚಂದ್ರವದನಕೆ ಬೂದಿ ಬಳಿ
ಇಲ್ಲವಾದರೆ ನಿನ್ನ ದಾರಿ ನೀ ನೋಡು'

''ಗುಪ್ತ ಮಹಾರಾಜರು ಇದನ್ನು ಕೇಳಿ ಓಡಿಹೋಗಿ ಒಂದು ರಾಶಿ ಬೂದಿಯನ್ನು ಮುಖಕ್ಕೆ ಬಳಿದುಕೊಂಡು ಬಂದು ಹೇಳಿದರು''ಮಹಾರಾಜ್, ನಿಮ್ಮ ಸೇವಕ ಹಾಜರ್''. ಅವರ ಸರಳತೆ, ಪ್ರೀತಿ ಮತ್ತು ವ್ಯಾಕುಲತೆಯನ್ನು ಕಂಡು ಸ್ವಾಮೀಜಿಯವರು ಅವರನ್ನು ತಮ್ಮೊಂದಿಗೆ ಹೃಷೀಕೇಶಕ್ಕೆ ಕರೆದುಕೊಂಡು ಹೋದರು. ತಪೋಜೀವನದ ಕಠೋರತೆಯಿಂದಾಗಿ ಗುಪ್ತಮಹಾರಾಜರು ಶೀಘ್ರದಲ್ಲಿಯೇ ಪ್ರಬಲ ಜ್ವರಕ್ಕೆ ತುತ್ತಾದರು. ಅಲ್ಲಿ ಚಿಕಿತ್ಸೆಗೆ ಯಾವ ಅನುಕೂಲತೆಗಳೂ ಇಲ್ಲದ್ದರಿಂದ ಸ್ವಾಮೀಜಿಯವರು ಅವರನ್ನು ಕರೆದುಕೊಂಡು ಜನನಿಬಿಡ ಸ್ಥಳಕ್ಕೆ ಇಳಿದು ಬಂದರು. ಗುಪ್ತ ಮಹಾರಾಜರು ತಮ್ಮ ದುರ್ಬಲ ಶರೀರಕ್ಕೆ ದಂಡದ ಆಸರೆಯನ್ನು ಕೊಟ್ಟು ಹೇಗೋ ಮಾಡಿ ನಿಧಾನವಾಗಿ ಇಳಿದರು. ಸ್ವಾಮೀಜಿಯವರು ಅವರ ಗಂಟುಮೂಟೆಯನ್ನು ತಲೆಯ ಮೇಲೆ ಹೊತ್ತು (ಅದರಲ್ಲಿ ಗುಪ್ತ ಮಹಾರಾಜರ ಪಾದರಕ್ಷೆಗಳೂ ಇದ್ದವು) ತಂದರು. ಅನಂತರದಲ್ಲಿ ಈ ಬಗ್ಗೆ ಗುಪ್ತ ಮಹಾರಾಜರು ಭಾವೋದ್ವೇಗದಿಂದ ''ನನ್ನ ಸ್ಥಿತಿ 'ಉಲ್ಟಾ ತಿಳಿದೆಯಲ್ಲೋ ರಾಮ' ಎಂಬ ಕಥೆಯಂತಾಯಿತು. ಸ್ವಾಮೀಜಿಯವರೇ ನನ್ನ ಗಂಟುಮೂಟೆ ಹೊರುವಂತಾಯಿತು. ಅಷ್ಟೇ ಅಲ್ಲ, ಅದರಲ್ಲಿದ್ದ ಅತಿಭಾರವಾದ ನನ್ನ ಜೋಡನ್ನು ಸಹ ತಮ್ಮ ತಲೆಯ ಮೇಲಿರಿಸಿಕೊಂಡು ಬಂದರು. ಅಷ್ಟಲ್ಲದೆ, ಅವರನ್ನು ನಾನು ಸುಮ್ಮನೆ ಗುರುವನ್ನಾಗಿ ಮಾಡಿಕೊಳ್ಳುತ್ತಿದ್ದೆನೆ?'' ಎಂದರು.

''ಗುಪ್ತ ಮಹಾರಾಜರನ್ನು ಆಗ ಮಠದಲ್ಲಿ ಎಲ್ಲರೂ 'ಪಿರೀತಿ (ಪ್ರೀತಿ) ಮರುಳ' ಎನ್ನುತ್ತಿದ್ದರು. ಸ್ವಲ್ಪ ಪ್ರೀತಿ ತೋರಿದರೂ ಸಾಕು ಆನಂದದಿಂದ ಕುಣಿದಾಡುತ್ತಿದ್ದರು, 'ಗುಲಾಮ'ರೇ ಆಗಿ

[೧] ಇದಾದ ಕೆಲವು ವರ್ಷಗಳ ನಂತರ ರಾಮ್ ಮಹಾರಾಜರು ಬೇಲೂರು ಮಠಕ್ಕೆ ಬಂದಿದ್ದರು. ವಿರಜಾನಂದರೂ ಸಹ ಆಗ ಮಠದಲ್ಲಿಯೇ ಇದ್ದರು. ೧೯೪೭ರ ಡಿಸೆಂಬರ್ ೧೮ರಂದು ರಾಮ್ ಮಹಾರಾಜರು ವಾರಾಣಸೀ ಶ್ರೀರಾಮಕೃಷ್ಣ ಸೇವಾಶ್ರಮದಲ್ಲಿ, ಪ್ರಜ್ಞಾಪೂರ್ವಕವಾಗಿ ಶ್ರೀರಾಮಕೃಷ್ಣರ ನಾಮೋಚ್ಚಾರ ಮಾಡುತ್ತ ತಮ್ಮ ದೇಹವನ್ನು ತ್ಯಜಿಸಿದ್ದರು. ಆಗ ಅವರ ವಯಸ್ಸು ೭೬ ವರ್ಷ. ವಿರಜಾನಂದರು ಡೆಹರಾಡೂನ್‌ನಿಂದ ಮಠಕ್ಕೆ ತೆರಳುವಾಗ ಕಾಶಿಗೆ ಬಂದಿದ್ದರು. ಹೀಗಾಗಿ ರಾಮ್ ಮಹಾರಾಜರೊಂದಿಗೆ ಅಲ್ಲಿ ಕೊನೆಯ ಭೇಟಿಯಾಯಿತು.

ಬಿಡುತ್ತಿದ್ದರು. ಕೈ-ಕಾಲು ಒತ್ತುತ್ತಿದ್ದರು. ಎಷ್ಟೊಂದು ಕೆಲಸ ಮಾಡಿಕೊಡುತ್ತಿದ್ದರು!''

* * *

ಆಲ್ಮೋರದಿಂದ ಹಿಂತಿರುಗುವ ವೇಳೆ ಉದಯಶಂಕರರು ತಮ್ಮ ದೊಡ್ಡ ಮೋಟಾರು ಗಾಡಿಯನ್ನು ವಿರಜಾನಂದರು ಮತ್ತು ಸಂಗಡಿಗರಿಗಾಗಿ ಕಳುಹಿಸಿಕೊಟ್ಟಿದ್ದರು. ಅದರಲ್ಲಿ ಹೊರಟು ಕಾತ್‌ಗೋದಾಮ್ ತಲುಪಿ, ಸಂಜೆಗೆ ಹರಿದ್ವಾರದ ರೈಲನ್ನು ಹತ್ತಿದರು. ಕಾನ್ವಾಯ್ ಮಹಾರಾಜರು ಜೊತೆಯಲ್ಲೇ ಇದ್ದರು. ಪ್ರಯಾಣದಲ್ಲಿ ಎದುರಾಗುವ ತೊಂದರೆಗಳ ಬಗ್ಗೆ ತೀವ್ರ ನಿಗಾ ಇಟ್ಟಿದ್ದರು. ಕಂಖಲ್ ಸೇವಾಶ್ರಮದಲ್ಲಿ ವಿರಜಾನಂದರು ಐದು ದಿನಗಳಿದ್ದರು. ತಲುಪಿದ ದಿನದಂದೇ ಅಲ್ಲಿಯ ಪವಿತ್ರ ತೀರ್ಥವಾದ ಬ್ರಹ್ಮಕುಂಡದ ಸ್ಪರ್ಶ ಮಾಡಿಬಂದರು.

ಯಾರ ಎಡೆಬಿಡದ ಪರಿಶ್ರಮ ಹಾಗೂ ಕರ್ಮನಿಷ್ಠೆಯಿಂದ ಕಂಖಲಿನ ಈ ಸೇವಾಶ್ರಮವು ಹುಟ್ಟಿ ಬೆಳೆಯಿತೋ, ಯಾರು ಸ್ವಾಮೀಜಿಯವರ ಪ್ರಿಯ ಶಿಷ್ಯರಾಗಿದ್ದರೋ ಆ ಕಲ್ಯಾಣಾನಂದರು ಈಗಿಲ್ಲ. ಅಷ್ಟೇ ಅಲ್ಲ, ಅವರ ವಿಶ್ವಾಸಾರ್ಹ ಸಹಕಾರಿಯೂ, ಸ್ವಾಮೀಜಿಯವರ ಮತ್ತೊಬ್ಬ ಶಿಷ್ಯರೂ ಆದ ಸ್ವಾಮಿ ನಿಶ್ಚಯಾನಂದರೂ ಸಹ ಈ ಲೋಕದಲ್ಲಿಲ್ಲ. ಆದರೆ ಹಿಮಾಲಯದ ತಪ್ಪಲಿನಲ್ಲಿರುವ ಈ ಬೃಹತ್ ಸೇವಾಶ್ರಮದ ಪ್ರತಿ ಸ್ಥಳವೂ ಸಹ ಈ ಇಬ್ಬರು ಕರ್ಮಯೋಗಿಗಳ ಪುಣ್ಯಸ್ಮೃತಿಯನ್ನು ಜೀವಂತವಾಗಿಟ್ಟಿವೆ.

ಸ್ವಾಮಿ ಕಲ್ಯಾಣಾನಂದರ ದೇಹತ್ಯಾಗವಾದ ನಂತರ ಸೇವಾಶ್ರಮದ ಜವಾಬ್ದಾರಿಯನ್ನು ಸ್ವಾಮಿ ಅಸೀಮಾನಂದರು ವಹಿಸಿಕೊಂಡು, ಎರಡು ವರ್ಷಗಳು ಸಂದಿವೆ. ಇವರು ಹಾಗೂ ಇತರ ಆಶ್ರಮವಾಸಿಗಳು ಮಠಾಧ್ಯಕ್ಷರ ಆಗಮನದಿಂದ ಆನಂದತುಂದಿಲರಾಗಿದ್ದಾರೆ, ಉತ್ಸಾಹದಿಂದ ತುಂಬಿ ತುಳುಕಾಡುತ್ತಿದೆ ಆಶ್ರಮ. ಇಲ್ಲಿ ಸ್ವಾಮಿ ವಿರಜಾನಂದರು ಸ್ವಾಮೀಜಿಯವರ ಪುಣ್ಯಸ್ಮೃತಿಯನ್ನು ಆಶ್ರಮವಾಸಿಗಳೊಂದಿಗೆ ಒಂದು ದಿನ ಹಂಚಿಕೊಂಡರು. ಒಬ್ಬ ಬ್ರಹ್ಮಚಾರಿಯು ಅನೇಕ ದಿನಗಳಿಂದ ದೀಕ್ಷೆಗಾಗಿ ಕಾಯುತ್ತಿದ್ದು, ಅವನ ಅಭಿಲಾಷೆಯನ್ನೂ ಸಹ ಪೂರ್ಣಗೊಳಿಸಿದರು. ಒಂದು ದಿನ ವಿರಜಾನಂದರು ಹೃಷೀಕೇಶಕ್ಕೆ ಹೋಗಿಬಂದರು. ಮತ್ತೊಂದು ದಿನ ಸ್ವಾಮೀ ಅಸೀಮಾನಂದರು ಮತ್ತು ಕೆಲವು ಆಶ್ರಮವಾಸಿಗಳೊಂದಿಗೆ ಡೆಹರಾಡೂನಿಗೆ ಹೋಗಿ, ಅಲ್ಲಿಂದ ನಾಲ್ಕು ಮೈಲಿ ಉತ್ತರಕ್ಕಿರುವ ಕಿಶನ್‌ಪುರ ಎಂಬ ಗ್ರಾಮದಲ್ಲಿರುವ ಶ್ರೀರಾಮಕೃಷ್ಣ ಸಾಧನ ಕುಟೀರದಲ್ಲಿ ಇಡೀ ದಿನವನ್ನು ಕಳೆದು ಬಂದರು. ಚಿಕ್ಕದಾದ ಆ ನಿರ್ಜನ ಕುಟೀರವು ಅಂದು ಹಬ್ಬದ ಸಡಗರವೋ ಎಂಬಂತೆ ವಿಜೃಂಭಿಸಿತು.

ಹರಿದ್ವಾರದಿಂದ ಹೊರಟು ಸ್ವಾಮಿ ವಿರಜಾನಂದರು ೯ನೇ ನವೆಂಬರ್ (೧೯೩೩) ದೆಹಲಿಯನ್ನು ತಲುಪಿದರು. ಅನೇಕ ಸಂಖ್ಯೆಯಲ್ಲಿ ಭಕ್ತರು ನೆರೆದಿದ್ದರು. ಜ್ವರ ಬಂದಂತಿತ್ತಾದರೂ ಅನೇಕ ದೀಕ್ಷಾರ್ಥಿಗಳ ಅಭಿಲಾಷೆಯನ್ನು ಪೂರೈಸಿದರು. ಒಂದು ದಿನ ಭಕ್ತರ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಪಟ್ಟ ಪ್ರಶ್ನೆಗಳನ್ನು ಉತ್ತರಿಸಿದರು; ಪ್ರಾಸಂಗಿಕವಾಗಿ ಸ್ವಾಮೀಜಿಯವರೊಂದಿಗಿನ ನೆನಪುಗಳನ್ನೂ ಸಹ ಸ್ಮರಿಸಿದರು. ದೆಹಲಿಯಲ್ಲಿ ನಾಲ್ಕು ದಿನಗಳನ್ನು ಕಳೆದು ಬೃಂದಾವನ, ಮಥುರಾ ನೋಡಿಕೊಂಡು 'ಫ್ರಾನ್ಟಿಯರ್ ಮೇಲ್'ನಲ್ಲಿ ಪ್ರಯಾಣಿಸಿ, ೧೮ನೇ ನವೆಂಬರ್ ಮುಂಬೈಯನ್ನು ತಲುಪಿದರು.

ಮುಂಬೈ ಆಶ್ರಮಾಧ್ಯಕ್ಷರಾದ, ಕರ್ಮವೀರರಾದ ಸ್ವಾಮಿ ಸಂಬುದ್ಧಾನಂದರು ಸ್ವಾಮಿ ವಿರಜಾನಂದರಿಗೆ ರಾಜೋಚಿತ ಸ್ವಾಗತವನ್ನು ಏರ್ಪಡಿಸಿದ್ದರು. ವಿಪುಲ ಪುಷ್ಪಪತ್ರಗಳಿಂದ ಶೋಭಿತವಾದ ಮೋಟಾರುಗಾಡಿಯು ಮೆರವಣಿಗೆಯಲ್ಲಿ ಸೆಂಟ್ರಲ್ ಸ್ಟೇಷನ್ನಿನಿಂದ ಹೊರಟು ಹತ್ತು ಮೈಲಿ ದೂರದಲ್ಲಿದ್ದ ಖಾರ್‌ನ ಶ್ರೀರಾಮಕೃಷ್ಣಾಶ್ರಮವನ್ನು ತಲುಪಿತು. ದ್ವಾರದಲ್ಲಿಯೇ ಸ್ವಾಮಿ ಅನಂತಾನಂದರು (ಕಾನ್ವಾಯ್). ವಿರಜಾನಂದರು ನಕ್ಕು ಕೇಳಿದರು, ''ಕಂಖಲ್‌ನಲ್ಲಿ ಹೇಳಿದೆ ದಕ್ಷಿಣಭಾರತಕ್ಕೆ ಹೋಗುವೆ ಎಂದು, ಈಗೇನು ಇದ್ದಕ್ಕಿದ್ದಂತೆ ಬೊಂಬಾಯಿಗೆ ಹಾಜರ್!'' ಕಾನ್ವಾಯ್, ''ಮಹಾರಾಜ್, ಮದ್ರಾಸಿನಲ್ಲಿ ನಡೆದ ಸಡಗರ-ಸಂಭ್ರಮ ನೋಡಿಯೇ ಬೊಂಬಾಯಿಯನ್ನೇಕೆ ಬಿಡಬೇಕು ಎಂದೆನಿಸಿತು; ಇಲ್ಲಿಗೆ ಬಂದುಬಿಟ್ಟೆ!''

ಅನಂತಾನಂದರಿಗೆ ರಾವಣನ ತಾಯಿ ನಿಕಷೆಯ ಗಾಳಿ ಬೀಸಿತೇನು?! ಲಂಕಾ ವಿಜಯದ ನಂತರ ರಾಮನು ರಾಕ್ಷಸಪುರಿಯಲ್ಲಿ ಕಾಲಿಟ್ಟಾಗ ವೃದ್ಧೆ ನಿಕಷೆ ಇನ್ನೂ ಬದುಕಿದ್ದಳು. ಓಡಿ ಪಲಾಯನ ಮಾಡುತ್ತಿದ್ದವಳನ್ನು ವಾನರರು ಹಿಡಿದುಬಿಟ್ಟರು. ವಿಸ್ಮಿತವಾದ ರಾಮ ಪ್ರಶ್ನಿಸಿದ, ''ವೃದ್ಧೆಯೇ, ನಿನ್ನ ಮಕ್ಕಳು ಮಡಿದರು, ಮೊಮ್ಮಕ್ಕಳು ಮಡಿದರು, ಆತ್ಮೀಯ-ಸ್ವಜನರೆಲ್ಲ ಹತರಾದರು. ಆದರೂ ನಿನಗೇಕೆ ಪ್ರಾಣದ ಮೇಲೆ ಅಷ್ಟೊಂದು ಮಮತೆ?'' ಅದಕ್ಕೆ ನಿಕಷೆಯು, ''ರಾಮ, ಇಷ್ಟು ದಿನ ಬದುಕಿದ್ದೆನೆಂದು ನಿನ್ನ ಲೀಲೆಗಳನ್ನು ನೋಡಲು ಸಾಧ್ಯವಾಯಿತು. ಆದ್ದರಿಂದ ಇನ್ನೂ ಬದುಕುವ ಇಚ್ಛೆಯಿದೆ; ನಿನ್ನ ಲೀಲೆಗಳನ್ನು ಮತ್ತಷ್ಟೂ ನೋಡಬಹುದು!'' ಎಂದಿದ್ದಳು.

*(ಮುಂದುವರಿಯುವುದು)*

''ದುಷ್ಟ ಚಿಂತನೆಗಳು ಬಂದಾಗಲೆಲ್ಲ ಮನಸ್ಸು ಬೆಕ್ಕಿನ ಬಾಯಲ್ಲಿ ಸಿಲುಕಿಕೊಂಡ ಇಲಿಯಂತೆ ಒದ್ದಾಡುವುದು. ನೀನೇಕೆ ಹಾಗೆ ಕಷ್ಟಪಡಬೇಕು? ಅಂಥ ಸಂದರ್ಭದಲ್ಲಿ ನಿನ್ನ ಶಕ್ತಿಯನ್ನೆಲ್ಲ ಒಗ್ಗೂಡಿಸಿ, ದುಷ್ಟ ಚಿಂತನೆಗಳನ್ನೆಲ್ಲ ಕೊಡವಿ ದೂರಮಾಡು. ಅವುಗಳಿಂದ ಪಾರಾಗಲು ಇದೊಂದೇ ದಾರಿ.'' — ಸ್ವಾಮಿ ವಿಜ್ಞಾನಾನಂದ